ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4174
ಸದಸ್ಯರ ಹೆಸರು : ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್
ಉತ್ತರಿಸುವ ದಿನಾಂಕ : 04.07.2005
ಉತ್ತರಿಸುವವರು : ಲೋಕೋಪಯೋಗಿ ಮತ್ತು ಇಂಧನ ಸಚಿವರು

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| 1 | ಬೆಳಗಾಂನ ಉಚ್ಚಗಾಂವ್ ಮತ ಕ್ಷೇತ್ರದ ಉದ್ಯಮ್‌ಬಾಗ್‌ನಲ್ಲಿ ಒಂದು 110 ಕೆ.ವಿ ಸ್ಟೇಷನ್ ಪ್ರಾರಂಭಿಸುವ ಉದ್ದೇಶ ಇದೆಯೇ; | ಹೌದು |
| 2 | ಹಾಗಿದ್ದಲ್ಲಿ ಇತ್ತೀಚಿನ ಹಂತ ಏನು; ಯಾವಾಗ ಪೂರ್ಣಗೊಳಿಸಲಾಗುವುದು? | ಬೆಳಗಾಂನಲ್ಲಿರುವ ಉದ್ಯಮ್‌ಬಾಗ್‌ನಲ್ಲಿ ಹಾಲಿ ಇರುವ 33 ಕೆ.ವಿ. ಸಬ್ ಸ್ಟೇಷನ್ನನ್ನು 2x10 ಎಂ.ವಿ.ವಿ. 110/11 ಕೆ.ವಿ. ಸಬ್ ಸ್ಟೇಷನ್‌ಗೆ ಉನ್ನತೀಕರಣ ಗೊಳಿಸುವ ಪ್ರಸ್ತಾವನೆಗೆ ಕ.ವಿ.ಪ್ರ.ನಿ.ನಿ. ಯ ತಾಂತ್ರಿಕ ಸಮನ್ವಯ ಸಮಿತಿಯು ತತ್ವಶ: ಒಪ್ಪಿಗೆಯನ್ನು ನೀಡಿರುತ್ತದೆ. ಈ ಪ್ರಸ್ತಾವನೆಯನ್ನು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುವುದು. 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನ್ನು ಸ್ಥಾಪಿಸಲು ಹಾಲಿ ಇರುವ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಲ್ಲಿ ಸ್ಥಳವು ಸಾಕಾಗದೇ ಇರುವುದರಿಂದ ಇದಕ್ಕಾಗಿ ಪರ್ಯಾಯ ಭೂಮಿಯು ಬೇಕಾಗಿರುತ್ತದೆ. ಈ ಪರ್ಯಾಯ ಭೂಮಿಯನ್ನು ಗುರುತಿಸಲಾಗುತ್ತಿದೆ. ಸೂಕ್ತ ಭೂಮಿಯ ಗುರುತಿಸುವಿಕೆಯ ಮತ್ತು ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರೆತ ನಂತರ ವಿವರವಾದ |

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | | ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿ ಸಲಾಗುವುದು. ಸಾಮಾನ್ಯವಾಗಿ ಒಂದು 110 ಕೆವಿ ಸಬ್-ಸ್ಟೇಷನ್ನಿನ ನಿರ್ಮಾಣವನ್ನು ಪೂರ್ಣಗೊಳಿಸಲು 9 ತಿಂಗಳ ಕಾಲಾವಧಿ ಬೇಕಾಗಿರುತ್ತದೆ. |

ಪ್ರಶ್ನೆ ಸಂಖ್ಯೆ 327(4174)

(ಉತ್ತರ ಲಗತ್ತಿಸಲಾಗಿದೆ)

**SRI MANOHAR KALLAPPA KINEKAR** (UCHAGAON): Sri, the question is tegading the startingt of 110 KV Station in udyambag, Belgaum. Theyhave answered that the present 33 KV Station is going to be upgraded. But, they had answered that the present land where the 33 KV Station is there, that land is notsuitable, and presentable land, they are going to upgrade to110KV Station. I am asking what efforts have been made by the government to get the suitable land. Whether they are going to acquire or whether they are going to purhase the land?

**ಶ್ರೀ ಪಿ.ಜಿ.ಆರ್.ಸಿಂಧ್ಯಾ** (ಕೈಗಾರಿಕೆ ಸಚಿವರು) (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ): ಸನ್ಮಾನ್ಯ ಉಪಾಧ್ಯಕ್ಷರೇ, ಕಳೆದ ವಾರ ನಾನು ಬೆಳಗಾವಿಗೆ ಹೋದಂಥ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಸಣ್ಣ ಕೈಗಾರಿಕೆಗಳ ಸಂಘದವರು ನನ್ನನ್ನು ಭೇಟಿ ಮಾಡುವ ಮೂಲಕ ಉದಯಂಬಾಗ್‌ನಲ್ಲಿ ಪ್ರಸಕ್ತ ವರ್ಷವೇ 110 ಕೆ.ವಿ. ಸಾಮರ್ಥ್ಯದ ಸ್ಟೇಷನ್ ಪ್ರಾರಂಭಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಅವರಿಗೆ ನಾನು ಈಗಾಗಲೇ ಹೇಳಿರುವಂತೆ, 2005-06ನೇ ಸಾಲಿನ ಕೆಪಿಟಿಸಿಎಲ್‌ನ ಆಯ ವ್ಯಯದಲ್ಲಿ ಸೇರಿದಲಾಗಿದೆ. This year the work will be started, This is no. 1, has been included in the Action Plan of KPTCL,2005-06

ಇನ್ನು ಜಾಗದ ಕುರಿತಂತೆ ಹೇಳುವುದಾದರೆ, ಅಲ್ಲಿ ಹಳ್ಳ ಇರುವುದರಿಂದ ಮುಚ್ಚಬೇಕಾಗಿರುತ್ತದೆ. ಹಳ್ಳ ಮುಚ್ಚಬೇಕಾದರೆ ಒಂದಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ ಆದುದರಿಂದ, ಇದಕ್ಕೆ ಬದಲಾಗಿ ಪರ್ಯಾಯ ಜಮೀನು ತೆಗೆದುಕೊಳ್ಳಬೇಕೇ? ಅಥವಾ ಇಲ್ಲಿರುವ ಹಳ್ಳವನ್ನೇ ಮುಚ್ಚುವ ಮೂಲಕ ಅದೇ ಜಾಗವನ್ನು ತೆಗೆದುಕೊಳ್ಳಬೇಕೇ? ಎಂಬುದರ ಬಗ್ಗೆ ನಾನು ಇಂದು ಬೆಳಗ್ಗೆ ಸದನಕ್ಕೆ ಬರುವ ಮುನ್ನ ಕೆಪಿಟಿಸಿಎಲ್‌ನ ಅಧ್ಯಕ್ಷರೊಂದಿಗೆ ಸಮಾಲೋಚಿಸಿದ್ದೇನೆ. ಅವರು ಇವೆರಡರಲ್ಲಿ ಒಂದು ನಿರ್ಧಾರ either it will be filled up or different land will be taken Sub Station will be started. Work this year ಈ ವರ್ಷವೇ ಬೆಳಗಾವಿ ನಗರದಲ್ಲಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ 110 ಕೆ.ವಿ. ಸಾಮರ್ಥ್ಯದ ಸ್ಟೇಷನ್‌ಅನ್ನು ಪ್ರಾರಂಭಿಸುತ್ತೇವೆಂಬ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

**SRI MANOHAR KALLAPPA KINEKAR:** According to the answering months, will it be completed?

**ಶ್ರೀ ಪಿ.ಜಿ.ಆರ್.ಸಿಂಧ್ಯಾ:** 110 ಕೆವಿ. ಸಾಮರ್ಥ್ಯದ ಸಬ್ ಸ್ಟೇಷನ್ ಆರಂಭವಾದ ಒಂಭತ್ತು ತಿಂಗಳೊಳಗಾಗಿ ಕೆಲಸ ಮುಗಿಸುವುದಾಗಿ ಹೇಳಿದ್ದೇವೆ. ಆದರೆ ಆ ಜಮೀನಿನ ಬಗ್ಗೆ ಇನ್ನೂ ತಕರಾರು ಇರುವುದರಿಂದ ಮತ್ತು ಇದಕ್ಕೆ ಹೆಚ್ಚಿನ ಹಣ ಬೇಕಾಗಿರುವುದರಿಂದ ಹಾಗೂ ಅಲ್ಲಿರುವ ಫೌಂಡರಿ ಕ್ಲಸ್ಟರ್‌ನವರೂ ಫೀಸ್ ಬೇರರ್ಸ್ KASSIA ದವರು ಮತ್ತು ಬೆಳಗಾಂನ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಕೆಲವು ಸದಸ್ಯರು ನನ್ನನ್ನು ಭೇಟಿ ಮಾಡಿ ಆ ಜಾಗದ ಕುರಿತಂತೆ ಅನೇಕ ವಿಚಾರ ಗಳನ್ನು ತಿಳಿಸಿದ್ದಾರೆ. ನಾನು ಕೆಪಿಟಿಸಿಎಲ್‌ನ ಅಧ್ಯಕ್ಷರೊಡನೆ ಮಾತನಾಡಿ ಸಮಸ್ಯೆ ಬಗೆಹರಿಸುತ್ತೇನೆಂದು ಭರವಸೆ ಕೊಡುವುದರ ಜೊತೆಗೆ ಇದನ್ನು ಪ್ರಸಕ್ತ ವರ್ಷದ ಆಯವ್ಯಯದಲ್ಲಿಯೇ ಸೇರಿಸಿರುವುದರಿಂದ ಕೆಲಸ ಪ್ರಾರಂಭ ವಾಗುತ್ತದೆ. ಕೆಲಸ ಪ್ರಾರಂಭವಾದ ಒಂಭತ್ತು ತಿಂಗಳೊಳಗೆ ಪೂರ್ಣಗೊಳಿಸು ತ್ತೇವೆ.